ದಿನಾಂಕ: 23-08-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀಸವಾಲುಃ ಶ್ರೀ.**ಎಮ್.ಆರ್.ಬಿ.** ಪ್ರತಿವಾದಿ **1** ಮತ್ತು **2** ಪರ ವಕೀಲರಿಂದಃ</u>

14. ಖರೀದಿ ಕರಾರ ಪತ್ರವನ್ನು ಆನಂದ ಗೋಟಡಕಿಯವರು ಬರೆದಿರುತ್ತಾರೆ. ಸದರಿ ಆನಂದ ಗೋಟಡಕಿಯವರ ಕಚೇರಿ ಉಪ-ನೋಂದಾವಣಿ ಅಧಿಕಾರಿಗಳ ಕಚೇರಿಯ ಹತ್ತಿರ ಇದೆ ಎಂದರೆ ಸರಿ. ದಿನಾಂಕ 11.07.2017 ರಿಂದ 26.07.2017 ರವರೆಗು ಖರೀದಿ ಕರಾರ ಪತ್ರ ನೋಂದ ಆಗದೇ ಇರಲು ಕಾರಣ ಏನು ಎಂದು ವಾದ ಪತ್ರದಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ. ದಿನಾಂಕ 11.07.2017 ರಿಂದ 26.07.2017 ರವರೆಗು ಖರೀದಿ ಕರಾರ ಪತ್ರವು ಆನಂದ ಗೋಟಡಕಿ ಇವರ ಕಚೇರಿಯಲ್ಲಿಯೆ ಇತ್ತು. ಸದರಿಯವರು ತಾವು ಕರೆಯಲು ಕಳಿಸಿದಾಗ ಬರಬೇಕು ಎಂದು ಹೇಳಿದ್ದರು. ಉಪ-ನೋಂದಣಾಧಿಕಾರಿಗಳ ಕಚೇರಿಯಲ್ಲಿ ಸರ್ವರ್ ಬ್ಯೂಸಿ ಇದ್ದ ಕಾರಣ ಮತ್ತು ಆ ಸಮಯದಲ್ಲಿ ಕೊರೋನಾ ಇದ್ದ ಕಾರಣ ನಂಬರ ಬೇಗ ಹತ್ತುವುದಿಲ್ಲ ಎಂದು ಹೇಳಿದ್ದರು. ಗೋಕಾಕದಲ್ಲಿ ಮಾರ್ಚ್ 2020 ದಿಂದ ಪ್ರಾರಂಭ ಆಗಿತ್ತು ಎಂದರೆ ಅದಕ್ಕಿಂತ ಮೊದಲು ಸ್ವಲ್ಪ ಸ್ವಲ್ಪ ಪ್ರಾರಂಭ ಆಗಿತ್ತು ಎಂದು ಹೇಳುತ್ತಾರೆ. 2017 ರಿಂದ 2020 ರವರೆಗು ಯಾವುದೇ ಸರಕಾರಿ ಕಚೇರಿಗಳು ಬಂದ ಇರಲಿಲ್ಲ ಎಂದರೆ ಸರಿ.

15. ಸರ್ವರ್ ಬ್ಯೂಸಿ ಇದ್ದುದ್ದರಿಂದ ಮತ್ತು ಕೊರೋನಾ ಇದ್ದುದ್ದರಿಂದ ಈ ಎರಡು ಕಾರಣಗಳನ್ನು ಹೊರತುಪಿಡಿಸಿ ಖರೀದಿ ಕರಾರು ಪತ್ರ ನೋಂದ ಆಗದೇ ಇರಲು ಬೇರೆ ಕಾರಣ ಇರುವುದಿಲ್ಲ.

16. ಭೀಮನಾಯ್ಕು ಇವರು ದಿನಾಂಕ 20.08.2019 ರಂದು ಮೃತಪಟ್ಟಿರುತ್ತಾರೆ ಎಂದರೆ ಸರಿ. ದಿನಾಂಕ 26.07.2017 ರಿಂದ 20.08.2019 ರವರೆಗು ಭೀಮನಾಯ್ಕು ಇವರಿಗೆ ಖರೀದಿ ಕರಾರ ಪತ್ರದ ಆಧಾರದ ಮೇಲೆ ಖರೀದಿ ಪತ್ರ ಬರೆದುಕೊಡಿ ಎಂದು ನೋಟೀಸು ಕೊಟ್ಟಿಲ್ಲ. ಭೀಮನಾಯ್ಕು ಇವರ ತಂದೆ ಹೆಸರು ಹುಚ್ಚಪ್ಪ ಎಂದರೆ ಸರಿ.

17. ದಾವಾ ಆಸ್ತಿ, ಸರ್ವೆ ನಂ.9/1 ಹಾಗೂ 10/1 ಭೀಮನಾಯ್ಕು ಇವರ ತಂದೆ ಹುಚ್ಚಪ್ಪ ಇವರಿಗೆ ಮೃತ್ಯು ಪತ್ರದ ಮುಖಾಂತರ ಈ ಮೇಲೆ ಹೇಳಿದ ಆಸ್ತಿಗಳು ಬಂದಿವೆ ಎಂದೆ ಸರಿಯಲ್ಲ. ಸದರಿ ಆಸ್ತಿಗಳು ಹುಚ್ಚಪ್ಪ ಇವರಿಗೆ 1936 ರಲ್ಲಿ ಬಂದಿದ್ದು ಅದರ ಪ್ರಕಾರ ಬಗರನಾಳ ಗ್ರಾಮದ ಡೈರಿ ನಂ.386 ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಹುಚ್ಚಪ್ಪ ಇವರು 1954 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹುಚ್ಚಪ್ಪ ಇವರ ಮರಣಾ ನಂತರ ಈ ಮೇಲೆ ಹೇಳಿದ ಮೂರು ಆಸ್ತಿಗಳಿಗೆ ಅವರ ಹೆಂಡತಿಯ ಹೆಸರು ದಾಖಲಾಯಿತು ಎಂದರೆ ನನಗೆ ಗೊತ್ತಿಲ್ಲ. ಹುಚ್ಚಪ್ಪ ಇವರ ಹೆಂಡತಿ ಹೆಸರು ದಾಖಲಾದ ಕುರಿತು ಡೈರಿ ನಂ.1081 ಆಗಿದೆ ಎಂದರೆ ನನಗೆ ಗೊತ್ತಿಲ್ಲ.

18. 1986 ರಲ್ಲಿ ಹುಚ್ಚಪ್ಪ ಇವರ ಹೆಂಡತಿ ಲಕ್ಷ್ಮವ್ವ ಮೇಲೆ ಹೇಳಿದ ಮೂರು ಆಸ್ತಿಗಳನ್ನು ನನ್ನ ತಾಯಿ ಮತ್ತು ಚೆನ್ನವ್ವ ಇವರಿಗೆ ಮಾಡಿರುತ್ತಾರೆ ಎಂದರೆ ಸರಿ. ಅದರ ಪ್ರಕಾರ ಡೈರಿ ನಂ.2295 ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಚೆನ್ನವ್ವ ಇವರ ಮರಣಾ ನಂತರ ಮೂರು ಆಸ್ತಿಗಳಿಗೆ ಭೀಮನಾಯ್ಕು ಇವರ ಹೆಸರು ಹತ್ತಿರುತ್ತದೆ ಎಂದರೆ ಸರಿ. ಭೀಮನಾಯ್ಕು ಇವರ ಮರಣಾ ನಂತರ ಪ್ರತಿವಾದಿ 1 ಮತ್ತು 2 ಇವರು ವಾರಸಾ ಮಾಡಿಕೊಂಡಿರುತ್ತಾರೆ ಎಂದರೆ ಸರಿ.

19. ದಾವಾ ಅಸ್ತಿಯ ಅರ್ಧ ಹಿಸ್ಸೆಗೆ ಪ್ರತಿವಾದಿ 1 ಮತ್ತು 2 ರವರ ಹೆಸರು ಹಾಗೂ ಇನ್ನೂ ಉಳಿದ ಅರ್ಧ ಹಿಸ್ಸೆಗೆ ನನ್ನ ತಾಯಿಯ ಹೆಸರು ಜಂಟಿಯಾಗಿದೆ ಎಂದರೆ ಸರಿ. ದಾವಾ ಆಸ್ತಿ ಭೀಮನಾಯ್ಕ ಇವರ ಸ್ವಂತ ಗಳಿಸಿದ ಆಸ್ತಿ ಅಲ್ಲ ಅವರ ಹಿರಿಯರಿಂದ ಬಂದ ಆಸ್ತಿ ಎಂದರೆ ಸರಿ. ಪ್ರತಿವಾದಿ 1 ಮತ್ತು 2 ರವರ ಹೆಸರು ಎಂ.ಆರ್.ನಂ.166/2021-22 ರ ಪ್ರಕಾರ ದಾಖಲಾಗಿದೆ ಎಂದರೆ ಸರಿ. ಭೀಮನಾಯ್ಕ ಇವರ ಮರಣ ನಂತರ ಭೀಮನಾಯ್ಕ ಇವರ ಮಕ್ಕಳಾದ ಪ್ರತಿವಾದಿ 1 ಮತ್ತು 2 ಹಾಗೂ ನನ್ನ ತಾಯಿಯ ನಡುವೆ ವಾಟ್ನಿ ಆಗಿಲ್ಲ ಎಂದರೆ ಸರಿ.

20. ದಾವಾ ಆಸ್ತಿಯಿಂದ ಭೀಮನಾಯ್ಕ ಇವರಿಗೆ ಒಳ್ಳೆಯ ಉತ್ಪನ್ನ ಬರುತ್ತಿತ್ತು ಎಂದರೆ ಸರಿಯಲ್ಲ. ಖರೀದಿ ಕರಾರ ಪತ್ರದ ಕುರಿತು ಮಾತುಕತೆ ಗೋಕಾಕದ ನಮ್ಮ ಮನೆಯಲ್ಲಿ ಆಗಿರುತ್ತದೆ. ಖರೀದಿ ಕರಾರ ಪತ್ರ ಬರೆಯುವುದಕ್ಕಿಂತ ಒಂದು ತಿಂಗಳ ಮೊದಲು ಆಗಿರುತ್ತದೆ. ದಿನಾಂಕ 11.07.2017 ರಂದು ಮತ್ತು 26.07.2017 ರಂದು ಬಸಪ್ಪ ಹಾಲಪ್ಪನವರ, ವರಶಂಕರ ತಿಗಡಿ, ದೀಪಕ ಕಲ್ಲೋಳಿ, ಚಿನ್ನವ್ವ ಕಲ್ಲೋಳಿ ದಸ್ತು ಬರಹಗಾರರ ಕಚೇರಿಗೆ ಮತ್ತು ಉಪ-ನೋಂದಣಿ ಅಧಿಕಾರಿಗಳ ಕಚೇರಿಗೆ ಬಂದಿದ್ದರು ಆದರೆ ತಡ ಆಗಿದ್ದರಿಂದ ವಾಪಸ ಹೋಗಿರುತ್ತಾರೆ.

21. ಸದರಿ ಮೇಲೆ ಹೇಳಿದ 4 ಜನರು ಉಪ-ನೋಂದಣಿ ಅಧಿಕಾರಿಗಳ ಸಮಕ್ಷಮ ಹಾಜರಾಗಿ ಈ ವ್ಯವಹಾರ ಆದಾಗ ತಾವು ಹಾಜರಿದ್ದರು ಎಂದು ಹೇಳಿಕೆ ಕೊಟ್ಟಿಲ್ಲ. 2017 ರಲ್ಲಿ ದಾವಾ ಆಸ್ತಿಗೆ ಪ್ರತಿ ಎಕರೆಗೆ ರೂ.15,00,000/- ಯಿಂದ 20,00,000/- ಬೆಲೆ ಬಾಳುತ್ತಿತ್ತು ಎಂದರೆ ಸರಿಯಲ್ಲ. ಕರಾರ ಪತ್ರದಲ್ಲಿ ದಾವಾ ಆಸ್ತಿ ನೀರಾವರಿ ಜಮೀನು ಎಂದು ಬರೆಯಲಾಗಿದೆ ಎಂದರೆ ಸರಿ.

22. ಭೀಮನಾಯ್ಕು, ಪ್ರತಿವಾದಿ 1, 2 ಹಾಗೂ ಅವರ ಮಕ್ಕಳು ಒಂದೇ ಕುಟುಂಬದಲ್ಲಿ ಇರುತ್ತಾರೆ ಎಂದರೆ ಸರಿ. ಇವರೆಲ್ಲರೂ ಸೇರಿ ಸರ್ವೆ ನಂ.26/1 ರ 01 ಎ-24 ಗು ಜಮೀನು ಸಾಗುವಳಿ ಮಾಡುತ್ತಾರೆ ಎಂದರೆ ಸರಿ. ದಾಖಲೆಗಳಲ್ಲಿ 03 ಎ-08 ಗು ಪೈಕಿ ತಲಾ 01 ಎಕರೆ-24 ಗುಂಟೆಯಂತೆ ಪಾಲು ಆಗಿಲ್ಲ ಎಂದರೆ ಸರಿ.

23. ಪ್ರತಿವಾದಿ 1 ಮತ್ತು 2 ರವರ ಮಕ್ಕಳು ಹಾಗೂ ಸರಸ್ವತಿಯವರ ಮಕ್ಕಳು ಖರೀದಿ ಕರಾರ ಪತ್ರಕ್ಕೆ ಸಹಿ ಮಾಡಿಲ್ಲ ಹಾಗೂ 2 ನೇ ಪ್ರತಿವಾದಿಯೂ ಸಹ ಖರೀದಿ ಕರಾರ ಪತ್ರಕ್ಕೆ ಸಹಿ ಮಾಡಿಲ್ಲ ಎಂದರೆ ಸರಿ. ಖರೀದಿ ಕರಾರ ಪತ್ರ ಬರೆಯಿಸುವಾಗ ಸದರಿಯವರೆಲ್ಲರ ಹಕ್ಕು ಇದೆ ಎಂದು ನನಗೆ ಗೊತ್ತಿತ್ತು ಎಂದರೆ ಸರಿ. ದಾವಾ ಆಸ್ತಿ ಬಾಗಾಯತ ಜಮೀನು ಇದ್ದುದ್ದರಿಂದ ಪ್ರತಿವಾದಿಯರು ಮತ್ತು ಅವರ ಮಕ್ಕಳೆಲ್ಲರೂ ಸೇರಿ ಒಳ್ಳೆಯ ಬೆಳೆ ತೆಗೆಯುತ್ತಿದ್ದುದ್ದರಿಂದ ಅವರಿಗೆ ದಾವಾ ಆಸ್ತಿ ಮಾರಾಟ ಮಾಡುವ ಪ್ರಮೇಯ ಉಂಟಾಗಿರಲಿಲ್ಲ ಎಂದರೆ ಸರಿಯಲ್ಲ.

24. 2017 ರಲ್ಲಿ ಭೀಮನಾಯ್ಕು ಇವರಿಗೆ 80 ವರ್ಷ ಆಗಿತ್ತು ಎಂದರೆ ಸರಿಯಲ್ಲ. ಆದರೆ 65 ರಿಂದ 70 ವರ್ಷ ಆಗಿತ್ತು. ಸದರಿಯವರಿಗೆ ಕಣ್ಣು ಸರಿಯಾಗಿ ಕಾಣಿಸುತ್ತಿರಲಿಲ್ಲ ಹಾಗೂ ಕಿವಿ ಸರಿಯಾಗಿ ಕೇಳಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಭೀಮನಾಯ್ಕು ಇವರಿಗೆ ಪೇನಶನ್ ಬರುತ್ತಿತ್ತು ನಂತರ ಬರುವುದು ನಿಂತಿತ್ತು ಹಾಗೂ ಭೀಮನಾಯ್ಕು ಇವರು ಆರ್.ಎಂ.ಪಿ. ವೈದ್ಯರಿದ್ದರು ಅದರಿಂದ ತಕ್ಕಮಟ್ಟಿಗೆ ಆದಾಯ ಬರುತ್ತಿತ್ತು.

25.ಮೊದಲಿನಿಂದಲೂ ಭೀಮನಾಯ್ಕು ಇವರು ನನ್ನ ಮೇಲೆ ವಿಶ್ವಾಸ ಇಟ್ಟಿದ್ದರು ಎಂದರೆ ಸರಿ. ಸದರಿ ವಿಶ್ವಾಸದ ದುರುಪಯೋಗ ಪಡೆದುಕೊಂಡು

ಒಂದು ರೂಪಯಿ ಕೊಡದೇ ಸುಳ್ಳು ಖರೀದಿ ಕರಾರ ಪತ್ರವನ್ನು ಬರೆಯಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

26. ಖರೀದಿ ಕರಾರ ಪತ್ರ ಆದ 05 ವರ್ಷದ ನಂತರ ನೋಟೀಸು ಕೊಟ್ಟಿರುತ್ತೇವೆ ಎಂದರೆ ಸರಿ. ನಾನು ಮೇಲಿಂದ ಮೇಲೆ ಸ್ವತಃ ಪ್ರತಿವಾದಿಯರ ಬಳಿ ಹಾಗೂ ಮೃತ ಭೀಮನಾಯ್ಕು ಇವರ ಬಳಿ ಹೋಗಿ ಖರೀದಿ ಕರಾರ ಪತ್ರದ ಆಧಾರದ ಮೇಲೆ ಖರೀದಿ ಪತ್ರ ಬರೆದುಕೊಡಲು ಕೇಳಿರುತ್ತೇನೆ. ಭೀಮನಾಯ್ಕು ಇವರಿಗೆ ಖರೀದಿ ಕರಾರ ಪತ್ರ ಬರೆದುಕೊಡಲು ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ.

27. ಭೀಮನಾಯ್ಕು ಇವರು ಮನೆ ಹಿರಿತನ ಮಾಡುತ್ತಿದ್ದರು ಆ ನಾತೆಯಿಂದ ನನಗೆ ಖರೀದಿ ಕರಾರ ಪತ್ರ ಬರೆದುಕೊಟ್ಟಿದ್ದಾರೆ ಎಂದು ನನ್ನ ವಾದ ಪತ್ರದಲ್ಲಿ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ. ಪ್ರತಿವಾದಿ 1 ಮತ್ತು 2 ಹಾಗೂ ಅವರ ಮಕ್ಕಳಿಗೆ ಮತ್ತು ಸರಸ್ವತಿ ಹಾಗೂ ಅವರ ಮಕ್ಕಳಿಗೆ ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿಯವರಿಗೆ ಹಡಗಿನಾಳ ಗ್ರಾಮದಲ್ಲಿದ್ದ ಜಮೀನುಗಳ ಸರ್ವೆ ನಂಬರ ಮತ್ತು ಕ್ಷೇತ್ರ ನನಗೆ ಹೇಳಲು ಬರುವುದಿಲ್ಲ. ಹಡಗಿನಾಳ ಗ್ರಾಮದಲ್ಲಿ ಪ್ರತಿವಾದಿಯರಿಗೆ ಜಮೀನು ಇವೆ ಎಂದು ತೋರಿಸಲು ದಾಖಲೆಗಳನ್ನು ಹಾಜರ ಮಾಡಿಲ್ಲ.

28. ಖರೀದಿ ಕರಾರ ಪತ್ರವನ್ನು ಬರೆಯಲು ಭೀಮನಾಯ್ಕು ಇವರು ಮಾಹಿತಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಭೀಮನಾಯ್ಕು ಇವರಿಗೆ ವಯಸ್ಸಾಗಿದ್ದರ ದುರುಪಯೋಗಪಡಿಸಿಕೊಂಡು ಹಾಗೂ ಭೀಮನಾಯ್ಕು ಇವರು ನನ್ನ ಮೇಲೆ ಇಟ್ಟ ನಂಬಿಕೆಯ ದುರುಪಯೋಗಪಡಿಸಿಕೊಂಡು ಸುಳ್ಳು ಖರೀದಿ ಕರಾರ ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ಮತ್ತು ಮುಖ್ಯ

ವಿಚಾರಣೆ ಪ್ರಮಾಣ ಪತ್ರದಲ್ಲಿ ಸುಳ್ಳು ಮಾಹಿತಿ ಕೊಟ್ಟು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

(ಉಮೇಶ ಎಸ್ ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ